ಪೋಲೀಸ್ ಇಲಾಖೆಯ ಆಧುನೀಕರಣ ಯೋಜನೆಯ ಅಡಿಯಲ್ಲಿ ಕೇಂದ್ರ ನಿಧಿಯಿಂದ ಖರೀದಿಸಲಾದ ವಾಹನಗಳಲ್ಲಿ ಈವರೆವಿಗೂ ಕೋಮುವಾರು ಗಲಭೆಗಳ ಪ್ರದೇಶದಲ್ಲಿರುವ ೬೧ ಪೋಲೀಸ್ ಠಾಣೆಗಳಿಗೆ ಒಂದೊಂದು ಜೀಪುಗಳನ್ನು ಒದಗಿಸಲಾಗಿದೆ. ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಈ ಕೆಳಕಂಡ ಪೋಲೀಸ್ ಠಾಣೆಗಳಿಗೆ ಕೋಮುವಾರು ಗಲಭೆಗಳ ಪ್ರದೇಶವೆಂದು ಪರಿಗಣಿಸಿ ಜೀಪುಗಳನ್ನು ಒದಗಿಸಲಾಗಿದೆ.

ಅ) ಉಳ್ಳಾಲ ಪೋಲೀಸ್ ಠಾಣೆ

ಬ) ಬಂಟ್ವಾಳ ಪೋಲೀಸ್ ಠಾಣೆ

ಇ) ಮಂಗಳೂರು ಉತ್ತರ ಪೋಲೀಸ್ ಠಾಣೆ

ಈ) ಪುತ್ತೂರು ಪೋಲೀಸ್ ಠಾಣೆ

ಈ ಅಂಕಿ ಅಂಶಗಳನ್ನು ಪರಿಶೀಲಿಸಿದರೆ ಇಡೀ ರಾಜ್ಯದಲ್ಲಿ ಪೋಲೀಸ್ ಠಾಣೆಗಳಿಗೆ ಜೀಪು ಕೊಟ್ಟಿರುವುದು ೬೧ ಠಾಣೆಗಳಿಗೆ ಅವುಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲೆಗೆ ಈಗಾಗಲೇ ನಾಲ್ಕನ್ನು ಕೊಡಲಾಗಿದೆ.

ಆಧುನೀಕರಣ ಯೋಜನೆ ಅಡಿಯಲ್ಲಿ ಹಂತ ಹಂತವಾಗಿ ಎಲ್ಲಾ ಪೋಲೀಸ್ ಠಾಣೆಗಳಿಗೆ ಜೀಪುಗಳನ್ನು ಒದಗಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಗುಡ್ಡಗಾಡು ಪ್ರದೇಶವಾದ ಸುಳ್ಯ ಪೋಲೀಸ್ ಠಾಣೆಗೆ ಜೀಪನ್ನು ಒದಗಿಸುವ ಬಗ್ಗೆ ಪರಿಶೀಲಿಸಿ ಒಂದು ಜೀಪನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು.—ಶ್ರೀ ಪಿ. ಎಂ. ಚಿಕ್ಕಬೋರಯ್ಯನವರು ಮತ್ತು ಮುಕ್ತಾರುನ್ನೀಸಾ ಬೇಗಂ ಅವರು ಆಬ್ಸೆಂಟ್

ಶ್ರೀ ಬಾಬುರೆಡ್ಡಿ ತುಂಗಳ್.—ಆಬ್ಸೆಂಟ್

ಶ್ರೀ ಆರ್. ವೆಂಕಟರಾಮಯ್ಯ.—ಆಬ್ಸೆಂಟ್

ಶ್ರೀ ಜಿ. ರಾಮದಾಸ್.—ಆಬ್ಸೆಂಟ್

ಶ್ರೀ ಆರ್. ಎನ್. ನಾಯಕ್.—ಆಬ್ಸೆಂಟ್

ಶ್ರೀ ಎಂ. ಕೆ. ಕುಲಕರ್ಣಿ.—ಆಬ್ಸೆಂಟ್

ಶ್ರೀ ಬಿ. ಎಂ. ಇದಿನಬ್ಬ.—ಆಬ್ಸೆಂಟ್

೨) ಬಂಟ್ವಾಳ ಪುರಸಭೆಯ ವ್ಯಾಪ್ತಿಯ ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊರತೆ

ಶ್ರೀ ಬಿ. ಎ. ಉಮ್ಮರಬ್ಬ (ವಿಠಲ್).—ಮಾನ್ಯ ಅಧ್ಯಕ್ಷರೇ, ಬಂಟ್ವಾಳ ಪುರಸಭೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೀವ್ರ ಕೊರತೆ ಇದೆ ಇದಕ್ಕಾಗಿ ಬೃಹತ್ ಯೋಜನೆಯನ್ನು ಕೈಗೊಳ್ಳುವ ಭರವಸೆಯನ್ನು ಮಾನ್ಯ ಸರ್ಕಾರ ಮೂರು ವರ್ಷಗಳ ಹಿಂದಿನಿಂದಲೂ ನೀಡುತ್ತಿದ್ದರೂ ಕೆಂಚಿಕ್ಕೂ ಕಾರ್ಯರೂಪಕ್ಕೆ ಬಂದಿಲ್ಲ. ಈ ಕುಡಿಯುವ ನೀರಿನ ಯೋಜನೆಯ ವಸ್ತುಸ್ಥಿತಿಯ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಸವಿವರ ಹೇಳಿಕೆಯನ್ನು ಬಯಸುತ್ತೇನೆ. ತೀವ್ರ ನೀರಿನ ಕೊರತೆ ಇರುವ ಈ ಪುರಸಭೆಯ ಪ್ರದೇಶಗಳಿಗೆ ಪೂರ್ಣ ಪ್ರಮಾಣದ ಯೋಜನೆಯು ಅನುಷ್ಠಾನ ಆಗುವವರೆಗೆ ತಾತ್ಕಾಲಿಕ ತಕ್ಷಣದ ಕ್ರಮದ ಅವಶ್ಯಕತೆ ಇದ್ದು ಆ ಬಗ್ಗೆ ಮಾನ್ಯ ಸಚಿವರ ವಿವರಗಳೊಂದಿಗೆ ರಚನಾತ್ಮಕ ಭರವಸೆಯನ್ನು ಒತ್ತಾಯಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ನಗರಾಭಿವೃದ್ಧಿ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ಈ ವಿಷಯವನ್ನು ತಂದು ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಕ್ಷಣ ತೆಗೆದುಕೊಳ್ಳತಕ್ಕಂಥದ್ದರ ಬಗ್ಗೆ ಭರವಸೆಯನ್ನು ನಾನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ಡಿ. ನಾಗರಾಜಯ್ಯ, ಆಬ್ಸೆಂಟ್

೩) ಬಂಟ್ವಾಳ ತಾಲ್ಲೂಕಿನಲ್ಲಿ ದೋರ್ಮೆ ಖಾಸಗಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರನ್ನು ಉದ್ಯೋಗದಿಂದ ನಿವೃತ್ತಿ ಮಾಡಿರುವುದು ಮತ್ತು ಅಲ್ಲಿ ನಡೆದಿರುವ ಅವ್ಯವಹಾರ

† ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು) –ಮಾನ್ಯ ಅಧ್ಯಕ್ಷರೇ ಪುತ್ತೂರು ವಿಧಾನ ಸಭಾ ಕ್ಷೇತ್ರಕ್ಕೆ ಒಳಪಟ್ಟ ಬಂಟ್ವಾಳ ತಾಲ್ಲೂಕು ವೆರ್ನ್ ಗ್ರಾಮದ ವ್ಯಜೀದಿಯ ದೋರ್ಮೆ ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯು ಅಲ್ಪಸಂಖ್ಯಾತ ಮುಸ್ಲಿಂಸಮು ದಾಯದವರಿಂದ ೧೯೪೮ನೇ ಇಸವಿಯಲ್ಲಿ ಸ್ಥಾಪನೆಗೊಂಡು ಅದರ ಸಂಚಾಲಯಕರು ೪-೪-೧೯೬೦ ರಂದು ಆಕಸ್ಮಿಕವಾಗಿ ಮರಣ ಹೊಂದಿದ ಕಾರಣ ಅವರ ಹಿರಿಯಮಗ ಶ್ರೀಯುತ ಮಹ್ಮದ ಕಂಜ್ಞ ಎಂಬುವರು ನ್ಯಾಯಾಲಯದ ಆದೇಶದಂತೆ ಮುಂದೆ ಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ೧೯೮೨ನೇ ಇಸವಿಯಲ್ಲಿ ಸದರಿಯವರು ಉದ್ಯೋಗ ನಿಮಿತ್ತ ಹೊರ ದೇಶಕ್ಕೆ ಹೋಗಬೇಕಾಗಿ ಬಂದಾಗ ಅವರ ತಮ್ಮ ಅಬ್ದುಲ್ಲಾ ಎಂಬುವರನ್ನು ಸಂಚಾಲಕರಾಗಿ ಕಾರ್ಯನಿರ್ವಹಿಸಲು ನೇಮಕ ಮಾಡಿದಾಗ ಅವರು ಶಾಲಾ ಸಮಿತಿಯ ಸದಸ್ಯರಲ್ಲ ಎಂಬ ಕಾರಣ ನಿಮಿತ್ತ ಇಲಾಖೆಯವರು ಅವರನ್ನು ನೇಮಕ ನಿರಾಕರಿಸಿದ್ದರಿಂದ ಪುನಃ ಶಾಲೆಯ ಮೇಲೆ ವಿಚಾರಣೆಯನ್ನು ನೋಡಿಕೊಂಡು ಬರಲು ಇಲಾಖೆಯವರಿಗೆ ಅರ್ಜಿ ಬರೆದ ಮೇರೆಗೆ ಸುಮಾರು ಒಂದು ತಿಂಗಳು ಇಲಾಖೆಯವರು ಕಾರ್ಯ ನಿರ್ವಹಿಸುತ್ತಿದ್ದರು. ಈ ಮಧ್ಯೆ ಶ್ರೀ ವ ಹಮದ್ ಕಂಜ್ಞ ಅವರ ಗಮನಕ್ಕೆ ತಾರದೆ ಶ್ರೀ ರಾಮದಾಸ್ ರೈ ಎಂಬುವರನ್ನು ಆಕ್ರಮವಾಗಿ ಶಾಲಾ ಸಂಚಾಲಕರಾಗಿ ೧೯೮೩ ರಿಂದ ನೇಮಿಸಿರುತ್ತಾರೆ. ಕೆಲವು ಪ್ರಭಾವಿ ವ್ಯಕ್ತಿಗಳ ಸಹಾಯವನ್ನು ಪಡೆದು ಶ್ರೀ ರಾಮದಾಸ ರೈ ಅವರು ಸಂಚಾಲಕರಾಗಿ ನೇಮಕಗೊಂಡಿರುತ್ತಾರೆ. ಆ ಬಳಿಕ ಶಾಲೆಯ ವ್ಯವಹಾರಗಳಲ್ಲಿ ಶ್ರೀ ರಾಮದಾಸರು ಆಕ್ರಮವಾಗಿ ಕೈ ಹಾಕಿ ಶಾಲಾಭಿವೃದ್ಧಿಯನ್ನು ಕುಂಠಿತಗೊಳಿಸಿರುತ್ತಾರೆ. ಶಾಲಾ ಅಧ್ಯಕ್ಷ ನೇಮಕ ವಿಷಯದಲ್ಲಿ ಕೂಡ ದುರ್ವ್ಯವಹಾರವನ್ನು ನಾಡಿ ಶಾಲೆ ಮತ್ತು ಊರಿನಲ್ಲಿ ಗೊಂದಲಮಯ ವಾತಾವರಣವನ್ನು ಉಂಟು ಮಾಡಿರುತ್ತಾರೆ. ಶಾಲಾ ದಾಖಲೆ ಪತ್ರಗಳಿಗೆ ಸಮಯಕ್ಕೆ ಸರಿಯಾಗಿ ಸಹಿಯನ್ನು ಹಾಕದೆ ಶಾಲಾ ಶಿಕ್ಷಕರಿಗೂ ತೊಂದರೆಯನ್ನುಂಟು ಮಾಡುತ್ತಿದ್ದಾರೆ. ಮಾಡುತ್ತಿದ್ದಾರೆ. ಅಲ್ಲದೆ ಶಾಲಾ ಶಿಕ್ಷಕರಿಗೂ ಶಾಲಾ ಕಟ್ಟಡದ ಬಗ್ಗೆ ತೊಂದರೆಗಳನ್ನು ಕೊಟ್ಟಿರುತ್ತಾರೆ ಅಲ್ಲದೆ ಶಾಲೆಯ ಕಟ್ಟಡಗಳ ದುರಸ್ತಿ ಮಾಡದೆ ಸರ್ಕಾರದಿಂದ ಸಿಗುವ ಸಹಾಯ ಧನವನ್ನು ದುರುಪಯೋಗ ಪಡಿಸಿರುತ್ತಾರೆ. ಈಗಿರುವ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಾಬುಶೆಟ್ಟಿ ಎಂಬುವರು ೧೯೮೮ನೇ ಇಸವಿ ಜೂನ್ ತಿಂಗಳು ೩೦ ರಂದು ನಿವೃತ್ತಿ ಹೊಂದ ಬೇಕಾದವರನ್ನು ಒಂದು ವರ್ಷದ ಮಟ್ಟಿಗೆ ಮುಂದುವರಿಸಲು ಸರ್ವಾನುಮತದ ನಿರ್ಣಯವನ್ನು ಶಾಲಾಭಿವೃದ್ಧಿ ಸಮಿತಿಯವರು ರಚಿಸಿ ಇಲಾಖೆಗೆ ಕಳುಹಿಸಿರುತ್ತಾರೆ. ಆದರೂ ಈ ಬಗ್ಗೆ ಇನ್ನೂ ಯಾವುದೇ ಉತ್ತರ ಬಂದಿರುವುದಿಲ್ಲ. ತಾ॥ ೧೬-೮-೧೯೮೮ ರಂದು ಶ್ರೀ ರಾಮದಾಸರು ಶಾಲಾ ಸಮಯದಲ್ಲಿ ತರಗತಿಗೆ ಆಕ್ರಮವಾಗಿ ಪ್ರವೇಶಿಸಿ ವಿದ್ಯಾರ್ಥಿ ಮತ್ತು ಅಧ್ಯಾಪಕರ ಮೇಲೆ ದಬ್ಬಾಳಿಕೆ ನಡೆಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಪರಿಗೆ ಮತ್ತು ಆರಕ್ಷಕ ಠಾಣೆಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪುನಃ ಶ್ರೀ ರಾಮದಾಸರು ಶಾಲಾ ಮುಖ್ಯೋಪಾಧ್ಯಾಯರನ್ನು ಉದ್ಯೋಗದಿಂದ ನಿವೃತ್ತಿಗೊಳಿಸಲು ನಿರ್ಣಯ ಮಾಡಿ ಕಳುಹಿಸಿರುತ್ತಾರೆ ಅಲ್ಲದೆ ಇನ್ನೂ ಅನೇಕ ಪ್ರಕರಣಗಳು ಕೂಡ ನಡೆದಿರುತ್ತದೆ. ಆದ್ದರಿಂದ ಮಾನ್ಯ ವಿದ್ಯಾ ಸಚಿವರು ಈ ಬಗ್ಗೆ ಗಮನಹರಿಸಿ ಕಳೆದ ೩೬ ವರ್ಷ ಸೇವೆ ಸಲ್ಲಿಸಿದ ಸದ್ರಿ ಮುಖ್ಯೋಪಾಧ್ಯಾಯರನ್ನು ಕೆಲಸದಲ್ಲಿ ಈ ವಾರ್ಷಿಕ ವರ್ಷದ ಅಂತ್ಯದವರೆಗೆ ಮುಂದುವರಿಸುವಂತೆ ಮತ್ತು ಸದರಿ ಶಾಲೆಯ ವಾತಾವರಣ ಸಂಪೂರ್ಣವಾಗಿ ಹಾಳಾಗಿ ಹೋಗಿರುವುದರಿಂದ ಶಾಲಾ ಮೇಲ್ವಿಚಾರಣೆಯನ್ನು ಇಲಾಖೆ ನಿರ್ವಹಿಸುವಂತೆ ಕೂಡಲೇ ಆದೇಶ ನೀಡಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ ಚಂದ್ರಶೇಖರ್ (ಶಿಕ್ಷಣ ಸಚಿವರು),—ಮಾನ್ಯ ಅಧ್ಯಕ್ಷರೇ, ಬಂಟ್ವಾಳ್ ತಾಲ್ಲೂಕು ವೆರ್ನ್ ಗ್ರಾಮದ ವ್ಯಜೀದಿಯ ದೋರ್ಮೆ ಖಾಸಗಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಸಂಚಾಲಕರ ಮೇಲಿನ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆ ಉಪ ನಿರ್ದೇಶಕರು ಈ ದೂರುಗಳ ಬಗ್ಗೆ